**ಮೂ.ದಾ.ನಂ.48/2016**

ಪಿ.ಡಬ್ಲ್ಯು 2

(ಇಂದು ದಿನಾಂಕ: **17-12-2024** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ. ಡಿ.ಎಸ್.ಭಟ್ಟ ವಕೀಲರಿಂದಃ**

ನಾನು ಸಂಪೂರ್ಣವಾಗಿ ರೈತಾಪಿ ಕೆಲಸವನ್ನು ಮಾಡುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ಯಾವ ಕೆಲಸ ಮಾಡುವುದಿಲ್ಲ. ನಾನು ನಮ್ಮ ಊರಿನ ದೇವಸ್ಥಾನ ಹಾಗೂ ಸಂಘ ಸಂಸ್ಥೆಗಳಲ್ಲಿ ಯಾವುದೇ ಹುದ್ದೆಯಲ್ಲಿ ಇರುವುದಿಲ್ಲ. ನಾನು ನನ್ನ ಸ್ವಂತ ತಿಳುವಳಿಕೆಯಿಂದ ವಾದಿಯ ವಕೀಲರರಿಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಪ್ರಮಾಣ ಪತ್ರ ಬರೆಯಿಸುವ ಮೊದಲು ನಾನು 1ನೇ ವಾದಿಯೊಂದಿಗೆ ಯಾವುದೇ ಚರ್ಚೆಯನ್ನು ಮಾಡಿರುವುದಿಲ್ಲ. ನಾನು 2016 ನೇ ಸಾಲಿನಲ್ಲಿ 1ನೇ ವಾದಿಯ ಮನೆಗೆ ಹೋದಾಗ ಅವರು ಪ್ರತಿವಾದಿಯವರ ವಿರುದ್ಧ ದಾವೆ ಮಾಡಿರುವ ವಿಷಯ ತಿಳಿಸಿರುತ್ತಾರೆ. ನನ್ನ ತಂದೆಯ ಶ್ರಾದ್ಧದ ಕೆಲಸದ ನಿಮಿತ್ತ ಪುರೋಹಿತರಾಗಿ 1ನೇ ವಾದಿಯನ್ನು ಕರೆಯಲು ಹೋದಂತಹ ಸಂದರ್ಭದಲ್ಲಿ ನನಗೆ ಅವರು ಈ ವಿಷಯವನ್ನು ತಿಳಿಸಿರುತ್ತಾರೆ. ಆ ಸಂದರ್ಭದಲ್ಲಿ 1ನೇ ವಾದಿಯು ದಾವೆಯು ಯಾವ ಸ್ವರೂಪದ್ದು ಹಾಗೂ ಯಾವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿದ್ದೇನೆ ಎಂದು ನನಗೆ ವಿವರಿಸಿರುತ್ತಾರೆ. ಪುರೋಹಿತರನ್ನು ಅವರ ಶಿಷ್ಯ ವರ್ಗದವರು ತುಂಬಾ ಗೌರವದಿಂದ ಹಾಗೂ ಗುರುಗಳಂತೆ ನೋಡಿಕೊಳ್ಳುತ್ತಾರೆ ಎಂದರೆ ಸರಿ.

ಸಾಕ್ಷಿಗೆ ಪುರೋಹಿತರ ಬಾಯಿಯಿಂದ ಬಂದಂತಹ ಯಾವುದೇ ಮಾಹಿತಿಯು ತಪ್ಪು ಇದ್ದರೂ ಸಹ ಸದ್ರಿ ವಿಷಯವು ಅವರ ಶಿಷ್ಯ ವರ್ಗದವರಿಗೆ ತಪ್ಪು ಇಲ್ಲ ಎಂದು ಕಾಣುವುದಿಲ್ಲ ಎಂದರೆ ಸಾಕ್ಷಿಯು ಪುರೋಹಿತರ ಬಾಯಿಯಿಂದ ಯಾವತ್ತೂ ತಪ್ಪು ವಿಷಯಗಳು ಬರುವುದಿಲ್ಲ ಎಂದು ನುಡಿಯುತ್ತಾರೆ.

**ಮೂ.ದಾ.ನಂ.48/2016**

ಪಿ.ಡಬ್ಲ್ಯು 2

1ನೇ ವಾದಿಯಿಂದ ಅವರಿಗೆ ಸಮಯ ಸಿಕ್ಕಿದಾಗಲೆಲ್ಲ ಅವರಿಂದ ನಾನು ಮಂತ್ರವನ್ನು ಕಲಿತಿರುತ್ತೇನೆ. ಇದರಿಂದಾಗಿ ನಾನು ಅವರ ಆಪ್ತ ಶಿಷ್ಯ ಎಂದರೆ ಸರಿ. ನಾನು 1ನೇ ವಾದಿಯ ಮನೆಗೆ ಹೋದಾಗಲೆಲ್ಲ ಅವರೊಂದಿಗೆ ಅವರ ಮಾಲೀಕತ್ವದ ತೋಟಗಳನ್ನೇಲ್ಲ ನೋಡಿಕೊಂಡು ಬರುವ ಹವ್ಯಾಸ ಇಟ್ಟುಕೊಂಡಿರುತ್ತೇನೆ. ನನ್ನ ಸಾಮಾಯಿಕ ಹಕ್ಕಿನ ಆಸ್ತಿಯು 1ನೇ ವಾದಿಯ ಮಾಲ್ಕೀ ಹಕ್ಕಿನ ಜಾಗದಿಂದ ಅಂದಾಜು 1 ಫರ್ಲಾಂಗ ದೂರದಲ್ಲಿ ಇದೆ. 5ನೇ ಪ್ರತಿವಾದಿಯು ನಮ್ಮ ಕುಟುಂಬದ ದಾಯಾದಿ ಆಗಿರುತ್ತಾರೆ. ಸಾಕ್ಷಿಯು 5ನೇ ಪ್ರತಿವಾದಿಯ ಅಜ್ಜಿಯ ಮನೆ ನನಗೆ ಸಂಭಂಧಿಕರಾಗಿರುವುದರಿಂದ 5ನೇ ಪ್ರತಿವಾದಿಯು ನನಗೆ ಸಂಭಂಧಿಕರಾಗಿರುತ್ತಾರೆ.

1ನೇ ವಾದಿಯ ಹಕ್ಕಿನ 331 ಹಿಸ್ಸಾ 10 ರ ಸ್ಥಳವು ನನ್ನ ಸಾಮಾಯಿಕ ಹಕ್ಕಿನ ಸ್ಥಳಕ್ಕೆ ಅತೀ ಹತ್ತಿರದಲ್ಲಿ ಇದೆ. ನಾನು ನನ್ನ ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ವಾದಿಯ ದಾವೆಯ ನಕಲು ಹಾಗೂ ಪ್ರತಿವಾದಿಯ ಪ್ರತಿವಾದ ಪತ್ರವನ್ನು ನಾನು ಓದಿರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ